


## ಬೇಸಿಗೆಗೆ ಸಕಾಲಿಕ ಲೇಖನ

ಬೇಸಿಗೆ ಶಿಬಿರಗಳ ಕುರಿತ ಕುಸುಮ್ ಬಿ.ಜಿ. ಅವರ ಲೇಖನ ಸಕಾಲಿಕವಾಗಿತ್ತು. ಶಿಬಿರದ ನೆಪದಲ್ಲಿ ಪಾಲಕರ ಶೋಷಣೆ ಆಗದಂತೆ ಸರ್ಕಾರ ನಿಯಂತ್ರಣ ತರಬೇಕು.

- ಸತೀಶ್ ಶೆಟ್ಟಿಗಾರ್, ಜಪ್ತಿ/ ಪಿ.ಗೋವಿಂದ ರಾಜ್, ಶಿವಮೊಗ್ಗ/ ಮಹಾವೀರ ಕಾಸಾರ, ಚನ್ನಗಿರಿ/ ನಾಗರಾಜ ಬಣಕಾರ, ಕೊಟ್ಟೂರು/ ವಿಭಾ ಮುರಳೀಧರ್, ತುಮಕೂರು/ ಎಚ್.ಎಂ. ಕಾಳಮ್ಮ, ಬಸರಕೋಡು/ ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

## ಮಂಗಳೂರು ಸುತ್ತ ಶಿಬಿರ

ಬೇಸಿಗೆ ಶಿಬಿರಗಳ ಬಗ್ಗೆ ಲೇಖಕರು ಚೆನ್ನಾಗಿ ಬರೆದಿದ್ದಾರೆ. ಮಂಗಳೂರಿನ ರಾಗ ತರಂಗ ಸಂಸ್ಥೆ ಕಳೆದ 25 ವರ್ಷಗಳಿಂದ ಮಾದರಿಯಾಗುವಂತಹ ಬೇಸಿಗೆ ಶಿಬಿರವನ್ನು ಈ ಪರಿಸರದ ವಠಾರ, ಶಾಲೆಗಳಲ್ಲಿ ನಡೆಸಿಕೊಂಡು ಬಂದಿದೆ. ಲೇಖನದಲ್ಲಿ ಇದನ್ನೂ ಪ್ರಸ್ತಾಪಿಸಬಹುದಿತ್ತು.

- ಎಚ್.ಜನಾರ್ದನ ಹಂದೆ, ಮಂಗಳೂರು



## ರಾಜ್ ಹಸಿವು ಹಿಂಗುವುದಿಲ್ಲ

ರಾಜಕುಮಾರ್ ಬಗ್ಗೆ ಎಷ್ಟು ಬರೆದರೂ, ಎಷ್ಟು ಓದಿದರೂ ಹಸಿವು ನೀಗುವುದಿಲ್ಲ. 'ಕೊನೆಯ ಮುತ್ತು' ಚ.ಹ.ರಘುನಾಥರ ಲೇಖನ ಸಕಾಲಿಕ ವಾಗಿತ್ತು. ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎನ್ನುವ ಕವಿವಾಣಿಯ ಪ್ರತೀಕವಾಗಿ ನಡೆದುಕೊಂಡ ಕರ್ನಾಟಕದ ಅನಭಿಷಿಕ್ತ ದೊರೆ ಡಾ.ರಾಜಕುಮಾರ್.

- ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ರಾಜಶೇಖರ ಗೌಡ, ಕೊಟ್ಟೂರು/ ನೆ.ಲ.ರಾಂ., ಬೆಂಗಳೂರು/ ರಮಜಾನ ಕೆ. ಕೊರ್ತಿ, ಬಾದಾಮಿ/ ಸಂಜಯಕುಮಾರ, ಕೋಣನಕೇರಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ತರಂಗಿಣಿ, ತುಮಕೂರು

## ಗತ ಯೌವನಾ!

'ಹ್ಯಾಪಿ ಬರ್ತ್‌ಡೇ ಭೂಮಿ!' (ಸುಮಂಗಲಾ ಮುಮ್ಮಿಗಟ್ಟಿ). 'ಪಾದಸ್ಪರ್ಶಂ ಕ್ಷಮ ಸ್ವಮೇ!' ಎಂಬುದು ಗತಕಾಲದ ಪ್ರಾರ್ಥನೆ. ಈಗಾದರೊ 'ಪೃಥಿವೀ ಗತ ಯೌವನಾ!' (ತಿರೆಯ ಹರಯ ತೀರಿತು) ಎಂಬ ವ್ಯಾಸರ ಮಾತು ಸತ್ಯವಾಗುತ್ತಿದೆ. (ಪೃಥ್ವಿಯ ಮೇಲೆ ಮಾನವನ ಅತ್ಯಾಚಾರ!)

-ಸಿಪಿಕೆ, ಮೈಸೂರು

## ಸಕಾಲಿಕ ಭೂ ದಿನ

ಮಾನವನ ದುರಾಸೆಯ ಫಲವಾಗಿ ಸುಂದರ ಪರಿಸರ ಮತ್ತು ಸಂಪತ್ತನ್ನು ಕಳೆದುಕೊಂಡು ಕಳಾಹೀನವಾಗುತ್ತಿರುವ ಸಂದರ್ಭದಲ್ಲಿ ಮೂಡಿ ಬಂದಿರುವ ಹ್ಯಾಪಿ ಬರ್ತ್‌ಡೇ ಭೂಮಿ ಲೇಖನ ನಮ್ಮ ತಪ್ಪು ಒಪ್ಪುಗಳ ಮೇಲೆ ಕ್ಷಕಿರಣ ಬೀರಿದೆ. ಭೂಮಿ ಜನ್ಮ ದಿನಾಚರಣೆಗೆ ಇದು ಸಕಾಲಿಕ.

-ನರೇಂದ್ರ ಸಿರಕಜೆ, ಮೈಸೂರು

## ಸಂಗ್ರಹಯೋಗ್ಯ ಸುಧಾ

ಕಳೆದ ಮೂರು ವರ್ಷಗಳಿಂದ ನಾನು ಸುಧಾ ಓದುತ್ತಿದ್ದೇನೆ. ವಾರದಿಂದ ವಾರಕ್ಕೆ ಅತ್ಯುತ್ತಮ ಮಾಹಿತಿಗಳೇ ಪ್ರಕಟವಾಗುತ್ತಿವೆ. ನೀವು ಕೇಳಿದಿರಿ, ನಗೆಹೊನಲು, ಹೆಲ್ತ್ ಪ್ಲಸ್, ಜಾಣರ ಪೆಟ್ಟಿಗೆ, ಸುಖೀಭವ ಓದುತ್ತ ಸಮಯ ಹೋದದ್ದೇ ಗೊತ್ತಾಗುವುದಿಲ್ಲ. ಮಾತೇ ಮುತ್ತು ಸೊಗಸಾಗಿವೆ. ಸಂಗ್ರಹಯೋಗ್ಯವಾಗಿವೆ.

-ಎಸ್.ನವೀನ್, ಅರಸೀಕೆರೆ

## ಪ್ರೇಕ್ಷಣೀಯ ಶಿಲಾಗ್ರಾಮ

'ಶಿಗ್ಗಾಂವಿಯ ಶಿಲಾಗ್ರಾಮ'ದ ಕುರಿತು ಕೇಳಿದ್ದೆವು. ಅದರ ಸಂಕ್ಷಿಪ್ತ ಪರಿಚಯ ಸುಧಾ ಮಾಡಿಕೊಟ್ಟಿದೆ. ಜಾನಪದ ಸೊಗಡಿನ, ಗ್ರಾಮೀಣ ಪರಿಸರ ನೆನಪಿಸುವ ಶಿಲಾಗ್ರಾಮ ಶೀಘ್ರವೇ ಪ್ರೇಕ್ಷಣೀಯ ಸ್ಥಳವಾಗಲಿ.

-ಎಂ.ಜೆ.ಆರ್. ಶೇಖರ್, ದೊಡ್ಡಬಳ್ಳಾಪುರ

## ಬೇರೆ ಕಡೆಯೂ ಪ್ರಕಟ

'ಶಿಗ್ಗಾಂವಿಯ ಶಿಲಾಗ್ರಾಮ' ಎಂಬ ಚಿತ್ರ ಲೇಖನ (ಟಿ. ಶಿವಕುಮಾರ್) ಏಪ್ರಿಲ್ 11ರಂದು ಬೇರೆ ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ.

-ಸರಸ್ವತಿ ಶಂಕರ್

## ವ್ಯಾಪ್ತಿ ದೊಡ್ಡದು

ಸಿದ್ದನಗೌಡ ಪಾಟೀಲರ 'ಬಂಗಾರ, ಹಸಿವು, ದೇಶಪಾಂಡೆ'– ಕಥೆ ಚಿಕ್ಕದಾದರೂ ವಿಶಾಲ ವ್ಯಾಪ್ತಿಯನ್ನು ಹೊಂದಿದೆ.

-ಕೊಹಿಮ, ಬಸರಕೋಡು

## ಅಡ್ಡಾದಿಡ್ಡಿ ಸಾಗಿದ ಲಹರಿ

'ವಿಚಾರ ಲಹರಿ' (ಏ. 22) ಗ್ರೀಷ್ಮ ಋತುವಿನ ಬಗ್ಗೆ ಹರಿದಾಡುವಂತೆ ಕಂಡರೂ, ಮಧ್ಯೆ ಅಡ್ಡಾದಿಡ್ಡಿಯಂತೆ ವಿಚಾರ ಎತ್ತೆತ್ತಲೋ ಸಾಗಿರುವುದರಿಂದ ಹೇಳಹೊರಟ ವಿಷಯದಿಂದ ದೂರವೇ ಉಳಿದಿದೆ.

-ಶಂಕರೇಗೌಡ ತುಂಬಕೆರೆ, ಮಂಡ್ಯ

